ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೊಂದನೆಯ ಅಧಿವೇಶನ
ಶುಕ್ರವಾರ, ದಿನಾಂಕ: 25ನೇ ಸೆಪ್ಟೆಂಬರ್, 2020

ಪ್ರವಾಸೋದ್ಯಮ ಇಲಾಖೆಯ ನಿಗಮದ ಸಿಬ್ಬಂದಿ ವೆಚ್ಚ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

636 (773) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2001 ರಿಂದ ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ನಿಗಮದಲ್ಲಿ ಅನುಕಂಪ ಆಧಾರದ ಮೇಲೆ ಕೆಲಸ ಕೋರಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ ; ಎಷ್ಟು ಜನರಿಗೆ ಕೆಲಸ ನೀಡಲಾಗಿದೆ ; ಬಾಕಿ ಇರುವ ಅರ್ಜಿಗಳು ಎಷ್ಟು ; (ನೌಕರರ ಹೆಸರು, ಅರ್ಜಿ ಸಲ್ಲಿಸಿದವರ ವಿಳಾಸ ಮತ್ತು ದಿನಾಂಕದೊಂದಿಗೆ ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ನಿಗಮಗಳಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸ ನೀಡಲು ನಿರ್ಬಂಧ ಇದೆಯೇ ; (ವಿವರವಾದ ಮಾಹಿತಿ ನೀಡುವುದು)

(ಇ) ಬಾಕಿ ಇರುವ ಅರ್ಜಿದಾರರಿಗೆ ಸರ್ಕಾರವು ಯಾವಾಗ ಕೆಲಸ ನೀಡಿ ಅವರಿಗೆ ಅನುಕೂಲ ಮಾಡಲಾಗುವುದು ;

(ಈ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮವು 2001 ರಿಂದ ಇಲ್ಲಿಯವರೆಗೆ ಯಾವ ಯಾವ ವರ್ಷಗಳಲ್ಲಿ ಲಾಭದಲ್ಲಿದೆ ; ಯಾವ ವರ್ಷಗಳಲ್ಲಿ ನಷ್ಟದಲ್ಲಿದೆ ; ಒಟ್ಟಾರೆ ಸವಕಳಿ ನಷ್ಟವೆಷ್ಟು ; ಲಾಭವೆಷ್ಟು? (ವರ್ಷಾವಾರು ವಿವರವಾದ ಮಾಹಿತಿ ನೀಡುವುದು)